# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 612
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 09.03.2026
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

| ಪ್ರಶ್ನೆ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025-26ನೇ ಸಾಲಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಸರ್ಕಾರಿ ಅನುದಾನಿತ ಶಾಲೆಗಳು, ಕಾಲೇಜುಗಳು ಹಾಗೂ ವಸತಿ ನಿಲಯಗಳ ಹದಿಹರೆಯದ ಹೆಣ್ಣು ಮಕ್ಕಳಿಗೆ ಶುಚಿ ಕಾರ್ಯಕ್ರಮದಡಿ ನ್ಯಾಪ್ಕಿನ್ ಪ್ಯಾಡ್ ಗಳನ್ನು ವಿತರಿಸಲು ಸರ್ಕಾರ ಕ್ರಮ ವಹಿಸಿದೆಯೇ; | ಕ್ರಮವಹಿಸಲಾಗಿದೆ. |
| ಆ) | ಕ್ರಮ ವಹಿಸಿದ್ದಲ್ಲಿ, ಶಾಲೆಗಳು, ಕಾಲೇಜುಗಳು ಹಾಗೂ ವಿವಿಧ ಇಲಾಖೆಗಳ ವಸತಿ ನಿಲಯಗಳಿಂದ ಒಟ್ಟು ಎಷ್ಟು ಹೆಣ್ಣು ಮಕ್ಕಳಿಗೆ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗಿದೆ; ಇದಕ್ಕೆ ತಗಲುವ ವೆಚ್ಚ ಎಷ್ಟು; | 2025-26ನೇ ಸಾಲಿಗೆ 'ಶುಚಿ' ಕಾರ್ಯಕ್ರಮದಡಿ ಶಾಲೆಗಳು, ಕಾಲೇಜುಗಳು ಹಾಗೂ ವಿವಿಧ ಇಲಾಖೆಗಳ ವಸತಿ ನಿಲಯಗಳಿಂದ ಒಟ್ಟು 19,64,507 ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲು ಕ್ರಮವಹಿಸಲಾಗಿರುತ್ತದೆ. ಸದರಿ ಚಟುವಟಿಕೆಗೆ ತಗಲುವ ವೆಚ್ಚ ರೂ. 4240.26 ಲಕ್ಷಗಳು. |
| ಇ) | ಒಂದು ನ್ಯಾಪ್ಕಿನ್ ಪ್ಯಾಡ್ ಗೆ ಅಂದಾಜು ಎಷ್ಟು ವೆಚ್ಚ ತಗಲುತ್ತದೆ; ಒಂದು ಹೆಣ್ಣು ಮಗುವಿಗೆ ವರ್ಷಕ್ಕೆ ಎಷ್ಟು ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ; | • ಪ್ರತಿ ನ್ಯಾಪ್ಕಿನ್ ಪ್ಯಾಡ್‌ಗೆ ತಗಲುವ ಅಂದಾಜು ವೆಚ್ಚ ರೂ.3.047<br>• 6 ರಿಂದ 8 ನೇ ತರಗತಿ ಫಲಾನುಭವಿಗಳಿಗೆ 9 ಯೂನಿಟ್ (ಒಂದು ಯೂನಿಟ್=10 ಪ್ಯಾಡ್‌ಗಳು) ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ. ಜೊತೆಗೆ 21 ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ.<br>• 9, 10ನೇ ತರಗತಿ, 1 ನೇ & 2ನೇ ಪಿಯುಸಿ ಹಾಗೂ ವಸತಿ ನಿಲಯಗಳಲ್ಲಿನ ಹೆಣ್ಣುಮಕ್ಕಳಿಗೆ 3 ಯೂನಿಟ್ (ಒಂದು ಯೂನಿಟ್=10 ಪ್ಯಾಡ್‌ಗಳು) ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ. ಜೊತೆಗೆ 24 ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ. |
| ಈ) | ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸುವಲ್ಲಿ ವಿಳಂಬವಾಗಿದೆಯೇ; ಆಗಿದ್ದಲ್ಲಿ ಕಾರಣವೇನು? | • ಕಳೆದ ವರ್ಷ 'ಶುಚಿ' ಕಾರ್ಯಕ್ರಮದಡಿ ಸರಬರಾಜು ಮಾಡಲಾದ ಸ್ಯಾನಿಟರಿ ನ್ಯಾಪ್ಕಿನ್‌ಗಳ ದಾಸ್ತಾನು ಜಿಲ್ಲೆಗಳಲ್ಲಿ ಜುಲೈ-2025 ರವರೆಗೂ ಲಭ್ಯವಿರುತ್ತದೆ.<br>• KTPP ಕಾಯ್ದೆ ಕಲಂ 4(ಜಿ) ಅಡಿಯಲ್ಲಿ ನಡೆಸಲಾಗುತ್ತಿದ್ದ ಖರೀದಿ ಪ್ರಕ್ರಿಯೆಯನ್ನು 'ಟೆಂಡರ್' ಪ್ರಕ್ರಿಯೆಗೆ ಬದಲಾವಣೆ ಮಾಡಿಕೊಳ್ಳಲಾಗಿರುತ್ತದೆ.<br>• 2025-26ನೇ ಸಾಲಿಗೆ 'ಶುಚಿ' ಕಾರ್ಯಕ್ರಮದಡಿಯಲ್ಲಿನ ಫಲಾನುಭವಿಗಳಿಗೆ ವಾರ್ಷಿಕ ಬೇಡಿಕೆಯಂತೆ ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ಪೂರೈಸಲು ನಿಯಮಾನುಸಾರ ಅವಶ್ಯವಿರುವ ನೀಡ್ ಅಸೆಸ್ ಮೆಂಟ್, ತಾಂತ್ರಿಕ ವೈಶಿಷ್ಟ್ಯತೆ ಹಾಗೂ ಪ್ರಕ್ಯೂರ್‌ಮೆಂಟ್ ಸಮಿತಿ ಸಭೆಗಳನ್ನು ನಡೆಸಿ, KSMSCL ಗೆ Indent ಅನ್ನು ಸಲ್ಲಿಸಲಾಗಿದ್ದು, 'ಟೆಂಡರ್' ಪ್ರಕ್ರಿಯೆಯು KSMSCL ವತಿಯಿಂದ ಚಾಲ್ತಿಯಲ್ಲಿರುತ್ತದೆ.<br>• ಮುಂದುವರೆದು, ಫಲಾನುಭವಿಗಳಿಗೆ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ತ್ವರಿತ ಪೂರೈಕೆಗಾಗಿ ಜಿಲ್ಲೆಗಳಿಗೆ ರೂ.999.96 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ಖರೀದಿಸಿ, ಪೂರೈಸಲಾಗಿರುತ್ತದೆ. ಇನ್ನುಳಿದ ಜಿಲ್ಲೆಗಳಲ್ಲಿ ಖರೀದಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ: ಆಕುಕ 8 ಎಸ್.ಟಿ.ಕ್ಯೂ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು